ಆಮೇಲೆ ದಿಲೀಪ್ ಆಕೆಯನ್ನು ಸಂಪರ್ಕಿಸಲು ಪ್ರಯತ್ನಿಸಲೇ ಇಲ್ಲವೇ?"

"ನನಗೆ ಗೊತ್ತಿಲ್ಲ. ನಾನು ಆಕೆಯ ವಿಷಯದಲ್ಲಿ ತಲೆ ಹಾಕಲಿಲ್ಲ." ವಿಶು ಹೇಳಿದ.

"ಸುಳ್ಳು ಹೇಳ್ತಿದ್ದಾನೆ, ಸಾರ್. ಇವ್ನು ನನ್ ಹೆಂಡ್ತಿಯ ಹತ್ತಿರ ಆಗಾಗ್ಗೆ ಉಪದೇಶ ಮಾಡ್ತಾ ಇದ್ದ. ಬಹುಶಃ ಇವ್ನಿಗೆ ಆ ಹುಡುಗನ ಜೊತೆ ಇನ್ನೂ ಸಂಪರ್ಕ ಇರಬೇಕು ಅನ್ನಿಸುತ್ತೆ. ಇವ್ನೇ ಇದನ್ನು ಪ್ಲಾನ್ ಮಾಡಿರಬಹುದು. ನಮ್ ಹುಡುಗೀನ ಹಾಳು ಮಾಡಿದ." ಪೂವಯ್ಯ ಬಿಕ್ಕಳಿಸಿದ.

"ಪೂವಯ್ಯ, ನೀವು ಆತುರ ಪಡಬೇಡಿ. ರಾಖಿ ಎಲ್ಲಿ ಹೋದಳೆಂಬುದು ಇನ್ನೂ ಪತ್ತೆಯಾಗಿಲ್ಲ. ಪೊಲೀಸರಿಗೆ ಹೇಳಿದ್ದೇನೆ. ಇನ್ನು ಸ್ವಲ್ಪ ಹೊತ್ತಿನಲ್ಲಿ ಅವರು ಹುಡುಕಾಡಿ ಆಕೆಯನ್ನು ಕರೆತರುತ್ತಾರೆ. ಆ ಹುಡುಗಿ ಸಾಯಿರಾ ಎಲ್ಲಿ? ಆಕೆಯೊಂದಿಗೆ ತುಸು ಮಾತಾಡುವುದಿತ್ತು." ಕರಮಚಂದ ಸಮಾಧಾನಿಸಿದ. ಆತನ ಮಾತಿನಲ್ಲಿದ್ದ ವಿಶ್ವಾಸ ನನಗೆ ಅಚ್ಚರಿ ಹುಟ್ಟಿಸಿತು.

***

ಸಾಯಿರಾ ಮಂಪರಿನಲ್ಲಿದ್ದರೂ, ತುಸು ಚೇತರಿಸಿಕೊಂಡಿದ್ದಳು. ಆಕೆಯ ಮೊಗದಲ್ಲಿ ನಮ್ಮನ್ನು ಕಂಡು ಗಾಬರಿ. ಟೀಪಾಯಿಯ ಮೇಲೆ ಅರ್ಧ ಖಾಲಿಯಾದ ಜ್ಯೂಸಿನ ಲೋಟ. ಅದರಲ್ಲೇನೋ ಬೆರೆಸಿ, ಸಾಯಿರಾಗೆ ಕೊಟ್ಟು ಆಕೆಯ ಸ್ಮೃತಿ ತಪ್ಪಿಸಿ, ರಾಖಿ ಪರಾರಿಯಾಗಿರಬೇಕೆಂದು ಮೇಲುನೋಟಕ್ಕೆ ಊಹಿಸಬಹುದಿತ್ತು. ಕರಮಂಚಂದ ಜ್ಯೂಸ್ ಲೋಟವನ್ನು ಮೂಸಿ, ಪರೀಕ್ಷಿಸಿದ.

"ನೀವು ಹೆದರುವ ಅಗತ್ಯವಿಲ್ಲ. ಹೇಳಿ, ಏನು ನಡೆಯಿತು?"

"ರಾಖಿಗೆ ಸೀರೆ ಉಡಿಸಲು ಆಕೆಯ ಜೊತೆಗೆ ಬಂದಿದ್ದೆ. ಉಡಿಸುವ ಮೊದಲು, ಷರಬತ್ತು ಕೊಟ್ಟಳು. ಅದನ್ನು ಕುಡಿದದ್ದಷ್ಟೇ ನನಗೆ ನೆನಪು. ಆಮೇಲೆ ಯಾರೋ ಮುಖಕ್ಕೆ ತಣ್ಣೀರು ಚಿಮುಕಿಸಿದಾಗಲೇ ಎಚ್ಚರವಾಗಿದ್ದು."

"ಷರಬತ್ತನ್ನು ಆಕೆ ನಂತರ ತರಿಸಿದ್ದೇ? ಅಥವಾ ಕೋಣೆಯೊಳಗೆ ಬರುವಾಗಲೇ ಇತ್ತೇ?"

"ನಾವು ಒಳ ಬಂದ ತುಸು ಹೊತ್ತಿನಲ್ಲಿ ಯಾರೋ ತಂದಿರಿಸಿ ಹೋದರು."

"ನೀವು ಅವಳ ಆಪ್ತ ಗೆಳತಿಯಲ್ಲವೇ?"

ಹೌದೆನ್ನುವಂತೆ ತಲೆ ಅಲುಗಿತು.

"ನಿಮಗೆ ರಾಖಿ ಎಷ್ಟು ಸಮಯದಿಂದ ಪರಿಚಯ?"

"ನಾವು ಒಂದನೇ ತರಗತಿಯಿಂದಲೇ ಒಟ್ಟಾಗಿ ಓದಿದವರು. ಕಾಲೇಜಿನಲ್ಲೂ ನಾವು ಜೊತೆಯಾಗಿಯೇ ಇದ್ದೆವು. ನಮ್ಮ ಮನೆಯ ಹಾದಿಯಲ್ಲೇ ಆಕೆಯ ಮನೆ. ಕಾಲೇಜು ಕಲಿತ ನಂತರ, ಆಕೆ ಉದ್ಯೋಗಕ್ಕೆ ಸೇರಿದಳು. ನಾನು ಮೈಸೂರಿನಲ್ಲಿ ಉನ್ನತ ವ್ಯಾಸಂಗದಲ್ಲಿ ತೊಡಗಿಸಿಕೊಂಡೆ."

"ನೀವು ನಿತ್ಯವೂ ಭೇಟಿಯಾಗುತ್ತೀರಾ?"

"ಇತ್ತೀಚೆಗೆ ಕಡಿಮೆಯಾಗಿತ್ತು. ರಜಾದಿನಗಳಲ್ಲಿ ಊರಿಗೆ ಬಂದಾಗಲಷ್ಟೇ ಭೇಟಿ. ಆದರೆ, ಮೊಬೈಲಿನಲ್ಲಿ ಸಂಪರ್ಕದಲ್ಲಿದ್ದೆವು."

"ರಾಖಿಗೆ ದಿಲೀಪ್ ಜೊತೆ ಈಗಲೂ ಸಂಪರ್ಕವಿದೆಯಾ?"

"ಇಲ್ಲ. ಅದು ಮುಗಿದು ಹೋದ ಕತೆ. ದಿಲೀಪ್ ಒಳ್ಳೆಯ ಹುಡುಗ. ಆದರೆ, ಪೂವಯ್ಯನವರಿಗೆ ಮನಸ್ಸು ಇರಲಿಲ್ಲ. ಆತ ಸ್ಥಿತಿವಂತನಲ್ಲ ಎಂದು. ಅವರ ಗೂಂಡಾಗಳ ಬೆದರಿಕೆಗೆ ಹೆದರಿ, ಆತ ಊರು ತೊರೆದ."

"ಮದುವೆಗೆ ಮೊದಲು ನೀವು ಕೊನೆಯ ಬಾರಿಗೆ ರಾಖಿಯನ್ನು ಭೇಟಿಯಾಗಿದ್ದು ಯಾವತ್ತು?"

"ನಾಲ್ಕೈದು ತಿಂಗಳುಗಳ ಹಿಂದೆ. ನಮಗೆ ಈಗ ಇಂಟರ್ನ್‌ಶಿಪ್ ನಡೆಯುತ್ತಿದೆ. ನಾನೊಂದು ಕಂಪನಿಗೆ ಸೇರಿಕೊಂಡಿದ್ದೇನೆ. ರಜೆ ಸಿಗುವುದಿಲ್ಲ."

"ನಿಮ್ಮ ಬುರ್ಖಾವೊಂದು ರಾಖಿಯ ಬಳಿ ಇತ್ತೇ?"

"ಇಲ್ಲವಲ್ಲ. ಯಾಕೆ?"

"ಸುಮ್ಮನೆ ಕೇಳಿದೆ."

ರಾಖಿಯ ಬ್ಯಾಗಿನೊಳಗೆ ಪರೀಕ್ಷಿಸಿದಾಗ, ಅದರೊಳಗಿದ್ದ ಬುರ್ಖಾ, ಆಕೆಯ ಸರ್ಟಿಫಿಕೇಟುಗಳೆಲ್ಲವೂ ಮಾಯ!

"ಬಹುಶಃ ಆಕೆ ಪರಾರಿಯಾಗಲು ಪೂರ್ವ ತಯಾರಿ ನಡೆಸಿಯೇ ಬಂದಿರಬೇಕು." ನಾನು ಉದ್ಗರಿಸಿದೆ.

"ಸಂಶಯವೇ ಇಲ್ಲ. ಬಿದ್ದಪ್ಪ, ಈ ಪ್ರಕರಣದಲ್ಲಿ ಯಾರ ಪಾತ್ರವಿರಬಹುದೆಂಬ ಬಗ್ಗೆ ನಿನ್ನ ಊಹನೆಯೇನಾದರೂ ಇದೆಯಾ?"